ಓ ಎಸ್ ನಂ31/2025

ಡಿ. ಡಬ್ಲ್ಯೂ ಃ 1

ದಿಃ 19.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ವಿ ವಿ  ವಕೀಲರಿಂದ ಃ

ನಮ್ಮ ಕುಟುಂಬದ ವಿಭಾಗ ಲಿಖಿತ ಪತ್ರದ ಮೂಲಕ ಆಗಿರುತ್ತದೆ.  ಲಿಖಿತ ವಿಭಾಗ ಪತ್ರವಾಗುವ ಕಾಲಕ್ಕೆ ಪ್ರತಿವಾದಿ 5 ಮತ್ತು ಇತರ ವಾದಿ ಮತ್ತು ಪ್ರತಿವಾದಿಗಳು ನನ್ನ ಜೊತೆ ಚೆನ್ನಾಗಿದ್ದರು ಎಂದರೆ ಸರಿ. ಲಿಖಿತ ವಿಭಾಗಪತ್ರ ಎಂದು ಹೇಳುತ್ತಿರುವ ವಿಭಾಗಪತ್ರದಲ್ಲಿ ವಾದಿ ಮತ್ತು ಪ್ರತಿವಾದಿ 5 ರವರ ಸಹಿ ಪಡೆದಿರುವುದಿಲ್ಲ ಮತ್ತು ಅವರಿಗೆ ಭಾಗ ನೀಡಿರುವುದಿಲ್ಲ ಎಂದರೆ ಸರಿಯಲ್ಲ.  ಈ ದಾವೆಯನ್ನು ಹೂಡುವ ಸಮಯಕ್ಕೆ ಸದರಿ ಭಾಗಪಟ್ಟಿಯನ್ನು ನೀಡಲು ನನಗೆ ಯಾವುದೆ ತೊಂದರೆ ಇರಲಿಲ್ಲ, ಅದನ್ನು ನಾನು ಎ ಸಿ ರವರಿಗೆ ನೀಡಿದ ಕಾರಣ ಮಾನ್ಯ ನ್ಯಾಯಾಲಯದಲಿ ಸಲ್ಲಿಸಿರುವುದಿಲ್ಲ. ಎ ಸಿ ಅವರಿಗೆ ದಾಖಲಾತಿಯನ್ನು ನೀಡಿದ್ದರೆ ನಾನು ಈ ನ್ಯಾಯಾಲಯಕ್ಕೆ ಒಂದು ದಾಖಲಾತಿಯನ್ನು ನೀಡಬಹುದಿತ್ತು ಎಂದರೆ ಸಾಕ್ಷಿ ಸರಿ ಇಲ್ಲ ಎಂದು ನುಡಿಯುತ್ತಾರೆ. ಎ ಸಿ ರವರಿಗೆ ವಿಭಾಗಪಟ್ಟಿಯಂತೆ ಖಾತೆ ಬದಲಾವಣೆ ಮಾಡಲು ಸದರಿ ವಿಭಾಗಪಟ್ಟಿಯನ್ನು ನೀಡಿದ್ದೇನು. ಸದರಿ  ಎ ಸಿ ರವರ ಮುಂದುವೆ ಖಾತೆ ಬದಲಾವಣೆ ಕುರಿತು ಯಾವುದಾದರೂ ಕೇಸ್ ನಡೆಯುತ್ತಿತ್ತೇ ಎಂದರೆ ಸಾಕ್ಷಿ ಯಾವುದೇ ಕೇಸ್ ಇರಲಿಲ್ಲ ಎಂದು ನುಡಿಯುತ್ತಾರೆ. ಎಸಿ ರವರಿಗೆ ಸದರಿ ಅರ್ಜಿಯನ್ನು ಕೊಡಲು ಬರುವುದಿಲ್ಲ. ಬದಲಾಗಿ ತಹಶೀಲ್ದಾರ್ ರವರಿಗೆ ಕೊಡಬೇಕಾಗಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ, ನಾನು ತಹಶೀಲ್ದಾರ್ ರಿಗೆ ನೀಡಿರುತ್ತೇನೋ ಅಥವಾ ಎ ಸಿ ಗೆ ನೀಡಿರುತ್ತೇನೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯವರಿಗೆ ಯಾವ ಆಧಾರದ ಮೇಲೆ ಖಾತೆಯಾಗಿರುತ್ತದೆ ಎಂದು ನಾನು ನೋಡಿ ತಿಳಿದುಕೊಂಡಿರುತ್ತೇನೆ. ನಿ ಡಿ 3 ರಲ್ಲಿ ವೈಯಕ್ತಿಕ ಪತ್ರ ಎಂದು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿ ಡಿ 3 ರಲ್ಲಿ ಭಾಗಪಟ್ಟಿಯ ಮೂಲಕ ವಿಭಾಗ ಆಗಿರುತ್ತದೆ. ದಾವಾ ಸ್ವತ್ತುಗಳನ್ನು ಹೆಣ್ಣು ಮಕ್ಕಳಿಗೆ ಕೊಡದೇ ಲಪಟಾಯಿಸುವ ಉದ್ದೇಶದಿಂದ ನಾವೇ ಖಾತೆಯನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಖಾತೆ ಮಾಡಿಸಿಕೊಳ್ಳಬೇಕಾದರೆ ಕುಟುಂಬದ ಇತರೇ ಸದಸ್ಯರುಗಳು ಒಪ್ಪಿಗೆ ನೀಡಬೇಕು ಎಂದರೆ  2002 ರಲ್ಲಿ ಆ ರೀತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ ಃ 29.04.2010 ರಲ್ಲಿ ಒಂದು ಕ್ರಯಪತ್ರವನ್ನು ಪಿ ವಿ ನಾಗೇಶ್ವರ್ ರವರಿಗೆ ನಮ್ಮ ಕುಟುಂಬದವರು ಮಾರಾಟ ಮಾಡಿರುವ ಕ್ರಯಪತ್ರವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 3 ರವರ ವಾರಸುದಾರರು ಈ ದಾವೆಯನ್ನು ಹೂಡಿದ ನಂತರ ವಾದಿ ಮತ್ತು ಪ್ರತಿವಾದಿ 5 ರವರ ಹತ್ತಿರ ಹಕ್ಕು ಬಿಡುಗಡೆ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ಹಕ್ಕು ಬಿಡುಗಡೆ ಪತ್ರದಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿರುವ ಬಗ್ಗೆ ಹೇಳಲಾಗಿರುತ್ತದೆ ಎಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿ ಹಕ್ಕು ಇದ್ದ ಕಾರಣ ಸದರಿ ವಾರಸುದಾರರು ಹಕ್ಕು ಬಿಡುಗಡೆ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ನಾನು ಈ ದಿನ ನಮ್ಮ ತಂದೆಯವರಿಗೆ ಸಂಬಂದಪಟ್ಟಂತೆ ಮಾತ್ರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು, ವಾದಿ ಮತ್ತು ಪ್ರತಿವಾದಿ 5 ರವರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತಾಗಿದ್ದು, ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಪ್ರತ್ಯೇಕವಾದ ಯಾವುದೇ ಹಕ್ಕುಗಳು ಇರುವುದಿಲ್ಲ ಎಂದರೆ ಸುಳ್ಳು.

ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ಹಾಕಬೇಕಾದರೆ ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬೈಲಮ್ಮ ನವರು ನಾಗೇಶ್ ರವರಿಗೆ ಮಾರಿರುತ್ತಾರೆ ಎಂದು ನಾನು ಹೇಳಿದ್ದು, ಈಗ ಆ ರೀತಿ ಕ್ರಯಪತ್ರವಾಗಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನಮ್ಮ ತಂದೆಯವರು ಆ ರೀತಿ ನನಗೆ ಹೇಳಿದ್ದರು ಎಂದು ನಾನು ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಬಾಗ ಕೇಳಿರುವ ಪ್ರಕಾರ ಈ ದಾವೆಯು ಭಾಗ ಆದರೆ ನನಗೆ ಏನು ತೊಂದರೆಯಾಗುವುದಿಲ್ಲ ಎಂದರೆ ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**